**ದಿನಾಂಕಃ 07-11-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಎಸ್ ಕೆ ಎನ್ ವಕೀಲರಿಂದಃ**

ನಾನು 4 ನೇ ತರಗತಿಯವರೆಗೆ ಒದಿರುತ್ತೇನೆ. ನಾನು ಸರ್ವೆ ಇಲಾಖೆಯಲ್ಲಿ ಡಿ ಗ್ರೂಪ್ ನ ನೌಕರನಾಗಿ ಕೆಲಸ ಮಾಡುತ್ತೇನೆ. ಆ ದಿನ ಭೂಮಿ ಅಳತೆ ಮಾಡಿಕೊಂಡು ಸಾಸುವಳ್ಳಿಯಿಂದ ಹೊನ್ನಾಳಿಗೆ ಬರುತ್ತಿದ್ದೇನು. ಸಾಮಾನ್ಯವಾಗಿ ಡಿ ಗ್ರೂಪ್ ನೌಕರರು ಕಚೇರಿಯಲ್ಲಿ ಕೆಲಸ ಮಾಡುತ್ತಾರೆ ಎಂದರೆ ನಾನು ಪಿಲ್ಡ ನಲ್ಲಿ ಸರ್ವೆಯರ್ ಅಸಿಸ್ಟಂಟ್ ಆಗಿ ಕೆಲಸ ಮಾಡಿರುತ್ತೇನೆ. ಸರ್ವೆಯರ್ ಅಸಿಸ್ಟಂಟ ಆಗಿ ಕೆಲಸ ಮಾಡಲು ಮೇಲಾಧಿಕಾರಿಗಳು ಅನುಮತಿ ಪಡೆದುಕೊಳ್ಳಬೇಕು ಎಂದರೆ ಪತ್ರ ಕೊಟ್ಟಿರುತ್ತಾರೆ. ನಾನು ಪಿಲ್ಡ ಕೆಲಸಕ್ಕೆ ಹೋಗಬೇಕಾದರೆ ಅವಕ ಜವಕ ರಜಸ್ಟರನಲ್ಲಿ ನಮೂದು ಮಾಡಿ ಹೋಗಬೇಕು ಎಂದರೆ ನಮ್ಮ ಕಚೇರಿಯಲ್ಲಿ 1 ರಿಂದ 5 ನೇ ತಾರಿಕ್ಕೀನವರೆಗೆ ಕಚೇರಿಯ ಕೆಲಸ ಹಾಗೂ ಉಳಿದ ದಿನಗಳಲ್ಲಿ ಪಿಲ್ಡ ಕೆಲಸಕ್ಕೆ ಹೋಗುತ್ತಿದ್ದು ಆ ಸಮಯದಲ್ಲಿ ಸಹಿ ಮಾಡುವುದಿಲ್ಲ. ಅಪಘಾತದ ದಿನದಂದು ಯಾವ ಲ್ಯಾಂಡ್ ಗೆ ಸರ್ವೆ ಮಾಡಲು ಹೋಗಿದ್ದೀರಿ ಎಂದರೆ ನಂಬರುಹೇಳಲು ಆಗುವುದಿಲ್ಲ 5 ವರ್ಷ ಆಗಿದ್ದರಿಂದ ನೆನಪಿಲ್ಲ ಎಂದು ಹೇಳುತ್ತಾರೆ. ನಾನು ಇಂದು ನ್ಯಾಯಾಲಯಕ್ಕೆ ಹೊನ್ನಾಳಿಯಿಂದ ಬಂದಿರುತ್ತೇನೆ. ಹುಟ್ಟಿದಾಗಿನಿಂದ ಅಲ್ಲಿಯೇ ವಾಸವಾಗಿದ್ದೇನೆ. ಅಪಘಾತವಾದ ಬೈಕು ನಂಬರು ಹೇಳಲು ನನಗೆ ನೆನಪಿಲ್ಲ. ಬೈಕು ನನ್ನ ಮಗನ ಹೆಸರಿನಲ್ಲಿದೆ. ನನ್ನ ಮಗನನ್ನು ಈ ಪ್ರಕರಣದಲ್ಲಿ ಪಕ್ಷಗಾರನಾಗಿ ಕಾಣಿಸಿಲ್ಲ. ನನ್ನ ಮಗನನ್ನು ಈ ಕೇಸಿನಲ್ಲಿ ಪಕ್ಷಗಾರನನ್ನಾಗಿ ಸೇರಿಸಲು ತೊಂದರೆ ಇರಲಿಲ್ಲ ಎಂದರೆ ಮಾಡಿಲ್ಲ ಎಂದು ಹೇಳುತ್ತಾರೆ. ಇದೇ ನ್ಯಾಯಾಲಯದಲ್ಲಿ ಈ ಪ್ರಕರಣಕ್ಕೆ ಸಂಬಂದಪಟ್ಟಂತೆ ಮುನೀರ್ ಎಂಬುವವರು ಎಮ್ ವಿ ಸಿ ನಂ.564/2020 ರಂತೆ ದಾಖಲು ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಪ್ರಕರಣದಲ್ಲಿ ಅವರು ನೂರುಲ್ಲಾ ಮುನೀರ್ ಸಾಬ್ ರವರಿಗೆ ನೋಟಿಸು ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಪ್ರಕರಣದಲ್ಲಿ ಅರ್ಜಿದಾರರು ಅಂದರೆ ನನ್ನ ಬೈಕಿನಲ್ಲಿ ಕುಳಿತ ಹಿಂಬದಿ ಸವಾರರಾದ ಅವರು ಮತ್ತು 3 ನೇ ಎದುರುದಾರರು ರಾಜಿಯಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಈ ಪ್ರಸ್ತುತ ಪ್ರಕರಣದಲ್ಲಿ ಇಫ್ಕೋ ಟೋಕಿಯೋ ಇನ್ಸುರನ್ಸ ಕಂಪನಿಯವರು ಪಕ್ಷಗಾರರನ್ನಾಗಿ ಸೇರಿಸಿಲ್ಲ ಎಂದರೆ ಸರಿ. ಈ ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಘಟನೆಗೆ ಸಂಬಂದಪಟ್ಟಂತೆ ಹೊನ್ನಾಳಿ ನ್ಯಾಯಾಲಯದಲ್ಲಿ ಸಿಸಿ ಪ್ರಕರಣದಲ್ಲಿ ನನ್ನನ್ನು ಆರೋಪಿಯಾಗಿ ಕಾಣಿಸಿದ್ದರು ಎಂದರೆ ಸರಿ. ಸದರಿ ಪ್ರಕರಣದಲ್ಲಿ ನನ್ನ ಮೇಲೆ ಆದ ಆರೋಪವನ್ನು ಒಪ್ಪಿಕೊಂಡು ದಂಡವನ್ನು ತುಂಬಿರುತ್ತೇನೆ ಎಂದರೆ ಸರಿ. ನನ್ನ ತಪ್ಪನ್ನು ಒಪ್ಪಿಕೊಂಡಿದ್ದರಿಂದ ಆ ಕಾರಣ ಎದುರುದಾರರು

ಪರಿಹಾರ ಕೊಡಲು ಬಾಧ್ಯಸ್ತರಲ್ಲ ಎಂದರೆ ಸರಿಯಲ್ಲ. ನಮ್ಮ ಬೈಕಿಗೆ ಇನ್ಸುರನ್ಸ ಇಲ್ಲದಿದ್ದರೂ ಸಹ ಪೋಲಿಸರೊಂದಿಗೆ ಮಿಲಾಪಿಯಾಗಿ ಎದುರುದಾರರೊಂದಿಗೆ ಮಿಲಾಪಿಯಾಗಿ ಸುಳ್ಳು ಕೇಸು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನು ಹೊನ್ನಾಳಿಯಲ್ಲಿ ವಾಸವಾಗಿರುವುದರಿಂದ ಈ ನ್ಯಾಯಾಲಯದಲ್ಲಿ ವಿಚಾರಣೆ ಮಾಡುವ ಅಧಿಕಾರ ವ್ಯಾಪ್ತಿಯಲ್ಲಿ ಬರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಆಧಾರ ಕಾರ್ಡ , ರೇಷನ್ ಕಾರ್ಡ ಪ್ರತಿಯೊಂದು ದಾಖಲೆಗಳಲ್ಲಿ ಹೊನ್ನಾಳಿ ತಾಲುಕ್ಕು ಸೊರಟೂರು ಅಂತಾ ಇರುತ್ತದೆ ಎಂದರೆ ಸರಿ.

ಅಪಘಾತದ ಸ್ಥಳದ ಹತ್ತಿರದಲ್ಲಿ ರಸ್ತೆ ಕಾಮಗಾರಿ ನಡೆಯುತ್ತಿತ್ತು ಎಂದರೆ ಸರಿ. ಡಾಂಬಾರು ಹಾಕುವ ಮಶೀನ್ ರಸ್ತೆಯ ಬದಿಯಲ್ಲಿ ನಿಂತಿತ್ತು ಎಂದರೆ ಸರಿಯಲ್ಲ. ಮಧ್ಯದಲ್ಲಿ ನಿಂತಿತ್ತು ಎಂದು ನುಡಿಯುತ್ತಾರೆ. ಸದರಿ ಡಾಂಬಾರು ಮಶೀನನ್ನು ಬೇರೆ ವಾಹನದಲ್ಲಿ ತರಬೇಕು ಅದನ್ನು ರಸ್ತೆಯ ಬದಿಯಲ್ಲಿ ನಿಲ್ಲಿಸಿದ್ದರು ಎಂದರೆ ಸಾಕ್ಷಿಯೂ ರಸ್ತೆಯ ಮಧ್ಯದಲ್ಲಿ ನಿಲ್ಲಿಸಿದ್ದರು. ನಾನು ಪೋಲಿಸರ ಸಮಕ್ಷಮ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನು ಆಸ್ಪತ್ರೆಯಲ್ಲಿ ಹೇಳಿಕೆ ದೂರನ್ನು ಕೊಟ್ಟಿರುತ್ತೇನೆ ಎಂದರೆ ಸರಿ. ಸದರಿ ದೂರಿನಲ್ಲಿ ಬರೆದ ವಿಚಾರಗಳು ಸರಿ ಇದೆಯಾ ತಪ್ಪು ಇದೆಯಾ ಎಂದರೆ ನಾನು ಒದಿ ಹಾಕಿಲ್ಲ ಎಂದು ನುಡಿಯುತ್ತಾರೆ. ನಾನು ಸಲ್ಲಿಸಿದ ಅರ್ಜಿಯಲ್ಲಿ ಎನು ಬರೆದಿದೆ ಎಂದು ಗೊತ್ತಿದೆಯಾ ಎಂದರೆ ಮೊದಲು ಸಾಕ್ಷಿಯೂ ಗೊತ್ತಿಲ್ಲ ಎಂದು ನುಡಿದಿರುತ್ತಾರೆ ನಂತರ ಅಪಘಾತವಾದ ಬಗ್ಗೆ ಎಂದು ನುಡಿಯುತ್ತಾರೆ. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳು ನಿನಗೆ ಗೊತ್ತಿದೆಯಾ ಎಂದರೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಹೇಳಿಕೆ ದೂರಿನಲ್ಲಿ ನನ್ನ ವಯಸ್ಸನ್ನು 59 ಎಂದು ತೋರಿಸಿದೆ ಎಂದರೆ ಸರಿ. ಸುಳ್ಳು ವಯಸ್ಸು ತೋರಿಸಿ ಸುಳ್ಳು ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಾಯಾವಕಾಶ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದುಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಸಹಿ/–

(ಶ್ರೀಮತಿ ಹುಲ್ಲೂರ ಹೇಮಲತಾ ಬಸಪ್ಪ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.